# ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ

## DR. SHIVARAMA KARANTHA PILIKULA NISARGA DHAMA

ಆಡಳಿತ ಕಚೇರಿ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Administrative Office, Moodushedde Post, Mangaluru – 575 028 Ph : 0824 - 2263565 Fax : 2263562
Website:www.pilikula.com Email: pilikula96@gmail.com


ನಂ. ಪಿನಿಧಾ.ವಿವ: 115/Tender/2017-18ದಿನಾಂಕ:9.10.2017.

## ಸವಿವರ ಟೆಂಡರ್ ಪ್ರಕಟಣೆ

ಡಾ॥ ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ಜೈವಿಕ ಉದ್ಯಾನವನದ ವ್ಯಾಪ್ತಿಯಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವಂತೆ ಬ್ಯಾಟರಿ ಚಾಲಿತ ವಾಹನಗಳ ಮೂಲಕ ಮೃಗಾಲಯ ವೀಕ್ಷಣೆಗೆ ವ್ಯವಸ್ಥೆಯನ್ನು ಒದಗಿಸಲು ಆಸಕ್ತ ಸಾರ್ವಜನಿಕರು/ಉದ್ದಿಮೆದಾರರಿಂದ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರುಗಳನ್ನು ಸಲ್ಲಿಸುವ ಕೊನೆಯ ದಿನಾಂಕ **17.11.2017**ಅಪರಾಹ್ನ **4.00** ಗಂಟೆವರೆಗೆ. ಟೆಂಡರುಗಳನ್ನು ಅದೇ ದಿನ ಮಧ್ಯಾಹ್ನ 4.30 ಗಂಟೆಗೆ ಕಾರ್ಯನಿರ್ವಾಹಕ ನಿರ್ದೇಶಕರು ತೆರೆಯಲಿರುವರು. ಇ.ಎಂ.ಡಿ ಮೊತ್ತ ರೂ 1.00 ಲಕ್ಷವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಡಾ॥ ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಇವರ ಹೆಸರಿನಲ್ಲಿ ಒದಗಿಸತಕ್ಕದ್ದು. ಇತರೇ ಷರತ್ತುಗಳು ಈ ಕೆಳಕಂಡಂತಿರುತ್ತವೆ.

1. ಟೆಂಡರ್ ಗುತ್ತಿಗೆ ಅವಧಿಯು ಟೆಂಡರ್ ಮಂಜೂರಾತಿ ಪಡೆದ ದಿನಾಂಕದಿಂದ 3 ವರ್ಷದವರೆಗೆ ಅಥವಾ ಮುಂದಿನ ಟೆಂಡರ್ ಇತ್ಯರ್ಥವಾಗುವವರೆಗೆ ಚಾಲ್ತಿಯಲ್ಲಿರುತ್ತದೆ. ಆಡಳಿತಾತ್ಮಕ ಕಾರಣಗಳಿಂದ ಟೆಂಡರ್ ಇತ್ಯರ್ಥವಾಗುವುದು ತಡವಾದಲ್ಲಿ ಸಂಬಂಧಿಸಿದ ದಿನಾಂಕಗಳನ್ನು ಪರಿಷ್ಕರಿಸಿ ತಿಳಿಸಲಾಗುವುದು.
2. ಲೈಸನ್ಸ್ ಅವಧಿಯಲ್ಲಿ ಕನಿಷ್ಟ ಪಕ್ಷ ಉತ್ತಮ ದರ್ಜೆಯ ಹೊಸಆರು (6) ಬ್ಯಾಟರಿ ಚಾಲಿತ ವಾಹನಗಳನ್ನು ಗುತ್ತಿಗೆದಾರರೇ ಖರೀದಿಸಿ ಓಡಿಸಬೇಕಾಗುತ್ತದೆ. ನಂತರ ಅವಶ್ಯಕತೆಗೆ ಅನುಗುಣವಾಗಿ ಸಂಖ್ಯೆಯನ್ನು ಹೆಚ್ಚಿಸಬೇಕು.
3. ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಜೈವಿಕ ಉದ್ಯಾನವನದ ಒಳಗಡೆ ಬ್ಯಾಟರಿ ಚಾಲಿತ ವಾಹನ ಸಂಚಾರದ ಮಾರ್ಗವನ್ನುಟೆಂಡರ್ ಹಾಕುವ ಮೊದಲು ಖುದ್ದಾಗಿ ಪರಿಶೀಲಿಸಬೇಕು ಮತ್ತು ಹಾಲಿ ಇರುವ ರಸ್ತೆಯಲ್ಲಿ ಓಡಾಡಲು ಸೂಕ್ತವಾಗಿರುವ ವಾಹನಗಳನ್ನು ಮಾತ್ರ ಓಡಿಸಬೇಕು. ಅನಂತರದ ಯಾವುದೇಆಕ್ಷೇಪಗಳನ್ನು ಸ್ವೀಕರಿಸಲಾಗುವುದಿಲ್ಲ. ಸೂಕ್ತವಲ್ಲದ ವಾಹನಗಳನ್ನು ಒದಗಿಸಿದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಟೆಂಡರ್ ರದ್ದುಗೊಳಿಸಲಾಗುವುದು ಮತ್ತು ಇದಕ್ಕೆ ಯಾವುದೇ ಪರಿಹಾರವನ್ನು ಡಾ॥ ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಿಂದ ನೀಡಲಾಗುವುದಿಲ್ಲ.
4. ಯಶಸ್ವಿ ಟೆಂಡರುದಾರರು ಜೈವಿಕ ಉದ್ಯಾನವನದ ಒಳಗಡೆ ಪ್ರವಾಸಿಗರು ಬ್ಯಾಟರಿ ಚಾಲಿತ ವಾಹನದಲ್ಲಿ ಸಂಚರಿಸಲುವಿಧಿಸುವ ದರವನ್ನುಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಪಿಲಿಕುಳ ಜೈವಿಕ ಉದ್ಯಾನವನದ ನಿರ್ದೇಶಕರೊಂದಿಗೆ ಚರ್ಚಿಸಿ ನಿಗಧಿಪಡಿಸುವುದು.
5. ಯಶಸ್ವಿ ಟೆಂಡರುದಾರರು ಅವಶ್ಯಕತೆಗೆ ಅನುಗುಣವಾಗಿ ಜೈವಿಕ ಉದ್ಯಾನವನದ ಹೊರಭಾಗದಲ್ಲಿ ಪಿಲಿಕುಳದ ಇತರೆ ಆಕರ್ಷಣೆ ಸ್ಥಳಗಳಿಗೂ ಬ್ಯಾಟರಿ ಚಾಲಿತ ವಾಹನವನ್ನು ಪ್ರವಾಸಿಗರ ವೀಕ್ಷಣೆಗೆ ಒದಗಿಸಲು ಸಿದ್ಧರಿರಬೇಕು.
6. ಜೈವಿಕ ಉದ್ಯಾನವನದ ಒಳಗಡೆ ಮೃಗಾಲಯ ವೀಕ್ಷಣೆಗೆ ಬ್ಯಾಟರಿ ಚಾಲಿತ ವಾಹನದಲ್ಲಿ ಪಯಣಿಸುವ ಪ್ರವಾಸಿಗರು ಮೃಗಾಲಯದ ಪ್ರವೇಶ ಶುಲ್ಕದ ಟಿಕೇಟನ್ನು ಪಡೆದಿರುವುದನ್ನು ಯಶಸ್ವಿ ಟೆಂಡರುದಾರರು ಖಾತ್ರಿಪಡಿಸಿಕೊಳ್ಳತಕ್ಕದ್ದು.
7. ಟೆಂಡರಿನ ಷರತ್ತು ನಿಬಂಧನೆಗಳನ್ನು ಉಲ್ಲಂಘಿಸಿದಅಥವಾ ಷರತ್ತುಗಳನ್ನೊಡ್ಡುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು,

8. ಪ್ರಸ್ತಾವಿತ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರುದಾರರು ಈ ಕೆಳಗೆ ವಿವರಿಸಿರುವ ಅರ್ಹತೆ ಹೊಂದಿರತಕ್ಕದ್ದು ಹಾಗೂ ಪೂರಕ ದಾಖಲೆಗಳನ್ನು ಸಲ್ಲಿಸತಕ್ಕದ್ದು.

ಅ) ವಿಳಾಸದ(Voter ID/Aadhar/Driving License)ಪ್ರತಿ

ಆ)PAN Card ಪ್ರತಿ

ಇ) ಟೆಂಡರುದಾರರು ಕಂಪೆನಿ, ನಿಗಮ ಅಥವಾ ಸಂಸ್ಥೆಗಳಾದಲ್ಲಿ ತಮ್ಮ ಟೆಂಡರ್ ಪ್ರಕ್ರಿಯೆಯನ್ನು ಪ್ರತಿನಿಧಿಸಲು ತಮ್ಮ ಸಂಸ್ಥೆಯ ಅರ್ಹ ಹಾಗೂ ಜವಾಬ್ದಾರಿಯುತ ಅಧಿಕಾರಿಯೊಬ್ಬರನ್ನು ನಿಗಧಿಪಡಿಸಿ, ಅಂತಹ ಅಧಿಕಾರಿಯ ಫೋಟೋ, ಮಾದರಿ ಸಹಿ ಹಾಗೂ ಸಂಪರ್ಕಿಸಲು ಸ್ಥಿರ ದೂರವಾಣಿ, ಮೊಬೈಲ್ ಫೋನ್ ಇ- ಮೇಲ್ ವಿಳಾಸ ಇತ್ಯಾದಿ ವಿವರಗಳನ್ನೊಳಗೊಂಡ ಅಧಿಕೃತ ಪತ್ರ ಹಾಗೂ ಕಂಪೆನಿ ಜಿ.ಎಸ್.ಟಿ. ಸಂಖ್ಯೆ ಇತ್ಯಾದಿಗಳನ್ನು ಸಲ್ಲಿಸುವುದು.

9. ಟೆಂಡರ್ ಸಲ್ಲಿಸುವಾಗ ಮೇಲಿನ ಕಂಡಿಕೆಯಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಒದಗಿಸಿಕೊಂಡು ತಿಂಗಳಿಗೆ ನೀಡಲು ಇಚ್ಚಿಸುವ ಲೈಸನ್ಸ್ ಶುಲ್ಕದ ಮೊತ್ತವನ್ನು ದಾಖಲಿಸತಕ್ಕದ್ದು. ಲೈಸೆನ್ಸ್ ಶುಲ್ಕವನ್ನು ಪ್ರತೀ ವರ್ಷ ಶೇ.20 ರಷ್ಟು ಹೆಚ್ಚಿಸಲಾಗುವುದು.

10. ಯಶಸ್ವಿ ಟೆಂಡರುದಾರರು ಟೆಂಡರಿನಲ್ಲಿ/ಸಂಧಾನದಲ್ಲಿ ಇತ್ಯರ್ಥವಾದ ತಿಂಗಳ ಲೈಸನ್ಸ್ ಶುಲ್ಕದ ದರದಂತೆ ಗುತ್ತಿಗೆ ಕರಾರು ದಿನಕ್ಕೆ ಅನ್ವಯವಾಗುವಂತೆ ಪ್ರತೀ ಮಾಹೆಯ ಮೊತ್ತವನ್ನು ತಿಂಗಳಿನ 5 ನೇ ತಾರೀಕಿನ ಮೊದಲು ಪಾವತಿಸತಕ್ಕದ್ದು.

11. ಯಶಸ್ವಿಟೆಂಡರುದಾರರು ಟೆಂಡರಿನಲ್ಲಿ/ಸಂಧಾನದಲ್ಲಿ ಇತ್ಯರ್ಥವಾದ ವಾರ್ಷಿಕ ಲೈಸನ್ಸ್ ಶುಲ್ಕದ ಮೊದಲ ಕಂತನ್ನು ಮುಂಗಡವಾಗಿ ಪಾವತಿಸಿ ರೂ.100/- ಬೆಲೆಯ ಛಾಪಾ ಕಾಗದದಲ್ಲಿ ಕರಾರು ಮಾಡಿಕೊಳ್ಳತಕ್ಕದ್ದು.

12. ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ವ್ಯಕ್ತಿ/ ಸಂಸ್ಥೆಗಳು, ಟೆಂಡರಿನಲ್ಲಿ ನಮೂದಿಸಿದಂತಹ ತಿಂಗಳ ಲೈಸನ್ಸ್ ಮೊತ್ತವನ್ನು ಮುಂಗಡವಾಗಿ ಪಾವತಿಸುವ,ಬ್ಯಾಟರಿ ವಾಹನ ನಿರ್ವಹಣೆ, ದುರಸ್ತಿ, ಕೆಲಸಗಾರರ ಸಂಬಳ ಸಾರಿಗೆ,ಅಘಘಾತ ವಿಮೆ, ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರ, ಟಿಕೆಟ್ ನೀಡಲು ತಾತ್ಕಾಲಿಕ ಕ್ಯಾಬಿನ್ ಇತ್ಯಾದಿ ವೆಚ್ಚಗಳನ್ನು ಭರಿಸುವ ಆರ್ಥಿಕ ಸಾಮರ್ಥ್ಯ ಹೊಂದಿರತಕ್ಕದ್ದು.

13. ಬ್ಯಾಟರಿ ಚಾಲಿತ ವಾಹನದಲ್ಲಿ ಸಂಚರಿಸುವ ಸಂದರ್ಶಕರಿಗೆ ಯಾವುದೇ ಅವಘಡವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಗುತ್ತಿಗೆದಾರರದ್ದೇ ಆಗಿರುತ್ತದೆ. ವಾಹನಗಳನ್ನು ಆಗಿಂದಾಗ್ಗೆ ತಪಾಸಣೆಗೆ ಒಳಪಡಿಸಿ ನಿರ್ವಹಿಸಿಕೊಂಡು ಬರಬೇಕು.ಅಪಘಾತ ವಿಮೆಗಾಗಿ, ಅಪಘಾತಕ್ಕೆ ಅವಶ್ಯವಿರುವಷ್ಟು ಮೊಬಲಗಿಗೆ ರಿಸ್ಕ್ ರಕ್ಷೆ ಪಾಲಿಸಿಯನ್ನು ಪಡೆದಿರತಕ್ಕದ್ದು. ಅದರ ಪ್ರತಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಬೇಕು. ಜೊತೆಗೆ ಬ್ಯಾಟರಿ ವಾಹನಗಳ ಅಪಘಾತ, ಬೆಂಕಿ, ಕಳ್ಳತನ ಇತ್ಯಾದಿಗಳಿಂದಾಗುವ ನಷ್ಟವನ್ನು ಪರಿಹರಿಸಿಕೊಳ್ಳುವ ಬಗ್ಗೆಯೂ ಸಹ ಸೂಕ್ತ ಇನ್ಸೂರೆನ್ಸ್ ಪಾಲಿಸಿ ಪಡೆದುಕೊಳ್ಳತಕ್ಕದ್ದು. ಸಂಭವಿಸಬಹುದಾದ ಯಾವುದೇ ಅವಘಡ/ನಷ್ಟಗಳಿಗೆ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಜವಾಬ್ದಾರಿಯಾಗಿರುವುದಿಲ್ಲ.

14. ಯಶಸ್ವೀಟೆಂಡರುದಾರರು,ಕಾರ್ಯಾರಂಭಕ್ಕೂ 2 ದಿನ ಮುಂಚೆ ಹಾಗೂ ಲೈಸನ್ಸ್ ಅವಧಿಯಲ್ಲಿ ಕೆಲಸದ ವೇಳೆ ಯಾವುದೇ ಸಮಯದಲ್ಲಿ ಪಿಲಿಕುಳ ಜೈವಿಕ ಉದ್ಯಾನವನದ ಆಡಳಿತದ ಯಾವುದೇ ಲಿಖಿತ/ಮೌಖಿಕ ಸೂಚನೆಗಳನ್ನು ಸ್ವೀಕರಿಸಲು ಮತ್ತು ಉತ್ತರ ನೀಡಲು ಕಾರ್ಯನಿರ್ವಾಹಕ ನಿರ್ದೇಶಕರವರ ಕಛೇರಿಯಲ್ಲಿ ಹಾಜರಿರತಕ್ಕದ್ದು ಅಥವಾ ಲೈಸನ್ಸ್‌ದಾರರ ಗೈರುಹಾಜರಾತಿಯಲ್ಲಿ ಸದರಿ ಜವಾಬ್ದಾರಿಯನ್ನು ನಿರ್ವಹಿಸಲು ಇಬ್ಬರು ಜವಾಬ್ದಾರಿಯುತ ಪ್ರತಿನಿಧಿಗಳನ್ನು ನೇಮಿಸಿರತಕ್ಕದ್ದು. ಲೈಸನ್ಸ್‌ದಾರರು ಅಂತಹ ಪ್ರತಿನಿಧಿಗಳ ಮತ್ತು ವಾಹನ ಚಾಲಕರ ಫೋಟೋವುಳ್ಳ ಗುರುತಿನ ಕಾರ್ಡ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರಿಂದ ಅನುಮೋದಿಸಿಕೊಂಡು ಜೈವಿಕ ಉದ್ಯಾನವನದೊಳಗೆ ಪ್ರವೇಶಿಸುವ ವೇಳೆ ಮತ್ತು ಕೆಲಸದ ವೇಳೆ ಅಂತಹ

ಪ್ರತಿನಿಧಿಗಳು ಮತ್ತು ಕೆಲಸಗಾರರು ತಮ್ಮ ತಮ್ಮ ಎದೆಯ ಭಾಗದ ಮೇಲೆ ಕಡ್ಡಾಯವಾಗಿ ಧರಿಸಿರುವಂತೆ ಏರ್ಪಾಡುಮಾಡಲು ಬದ್ಧರಾಗಿರಬೇಕಾಗಿರುತ್ತದೆ. ಅಲ್ಲದೇ ಸಿಬ್ಬಂದಿಗಳಿಗೆ ಸಮವಸ್ತ್ರ ಒದಗಿಸಬೇಕು.



15. ಜೈವಿಕ ಉದ್ಯಾನವನದ ಒಳಗೆ ಜೈವಿಕ ಉದ್ಯಾನವನದ ನಿರ್ದೇಶಕರು ಗುರುತಿಸಿ ಸೂಚಿಸಿದ ಸ್ಥಳಗಳಲ್ಲಿ ಮಾತ್ರ ಬ್ಯಾಟರಿ ಚಾಲಿತ ವಾಹನಗಳನ್ನು ನಿಲ್ಲಿಸಿ ಪ್ರವಾಸಿಗರಿಗೆ ವೀಕ್ಷಣೆಗೆ ಅನುಕೂಲ ಮಾಡಿಕೊಡಬೇಕು.

16. ಲೈಸೆನ್ಸ್‌ದಾರರು ನೇಮಿಸುವ ಸಿಬ್ಬಂದಿಗಳು ಪ್ರವಾಸಿಗರ ಜೊತೆಯಲ್ಲಿ ಸಭ್ಯತೆಯಿಂದ ವರ್ತಿಸಬೇಕು. ಅನುಚಿತವಾಗಿ ವರ್ತಿಸಬಾರದು ಮತ್ತು ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿನ ದರವನ್ನು ವಸೂಲಿ ಮಾಡಬಾರದು.

17. ಜೈವಿಕ ಉದ್ಯಾನವನದ ನಿರ್ದೇಶಕರು ಸೂಚಿಸುವ ಸ್ಥಳದಲ್ಲಿಟಿಕೆಟ್ ನೀಡಲು ಮತ್ತು ವಾಹನಗಳ ನಿಲುಗಡೆಗೆ ಶೆಡ್ ಅಳವಡಿಸಿ ಅದರಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರ ಇಡತಕ್ಕದ್ದು.ವರದಿಗಳಿಗಾಗಿ ಪ್ರವಾಸಿಗರ ಭದ್ರತೆ, ಹಿತ ಕಾಪಾಡುವ, ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಯೋಜನೆಗಳ ಅನುಷ್ಠಾನಕ್ಕಾಗಿ ಹಾಗೂ ಬೇಕಾಗಬಹುದಾದ ಅಂಕಿ ಅಂಶಗಳ ದೃಢೀಕರಣಕ್ಕೆ ಅನುವಾಗುವಂತೆ ಪ್ರತಿದಿನದ ಗ್ರಾಹಕರ ಸಂಖ್ಯೆಯನ್ನು ಈ ಕಛೇರಿಗೆ ನೀಡತಕ್ಕದ್ದು.

18. ಈ ಕೆಳಕಾಣಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ದಂಡವನ್ನು ವಿಧಿಸುವ ಹಕ್ಕನ್ನು ಹಾಗೂ ನಿಯಮ ಉಲ್ಲಂಘನೆ ಪ್ರಕರಣಗಳು ಮರುಕಳಿಸಿದಲ್ಲಿ ಗುತ್ತಿಗೆಯನ್ನು ಅಮಾನತಿನಲ್ಲಿಡುವ, ಗುತ್ತಿಗೆ ರದ್ದುಪಡಿಸುವ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ಈ ಕೆಳಗೆ ಸಹಿ ಮಾಡಿರುವವರಿಗೆ ಇರುತ್ತದೆ.

| ಕ್ರ.ಸಂ | ಉಲ್ಲಂಘನೆಯ ವಿವರಗಳು | ದಂಡದ ಮೊತ್ತ/ಕ್ರಮ |
|---|---|---|
| 1 | ಪ್ರವಾಸಿಗರೊಂದಿಗೆ ಅನುಚಿತವಾಗಿ ವರ್ತಸಿದರೆ | ರೂ. 200/– ಪ್ರಕರಣ ಒಂದಕ್ಕೆ |
| 2 | ಪ್ರವಾಸಿಗರಿಂದ ಹೆಚ್ಚಿನ ಶುಲ್ಕ ವಸೂಲಿ ಮಾಡಿದರೆ | ರೂ. 500/– ಪ್ರಕರಣ ಒಂದಕ್ಕೆ |
| 3 | ಅಪಘಾತ ವಿಮೆಯ ಪಾಲಿಸಿಯನ್ನು ಪಡೆಯದಿದ್ದರೆ | ರೂ. 500/– ತಡವಾದ ದಿನ ಒಂದಕ್ಕೆ |
| 4 | ಪ್ರತಿದಿನದ ಲೆಕ್ಕಗಳನ್ನು ನೀಡದಿದ್ದರೆ | ರೂ. 200/– ದಿನ ಒಂದಕ್ಕೆ |
| 5 | ದೂರು ಪುಸ್ತಕ ಇಡದಿದ್ದರೆ | ರೂ. 500/– ದಿನ ಒಂದಕ್ಕೆ |
| 6 | ಕೆಲಸಗಾರರು ಗುರುತಿನ ಚೀಟಿ ಧರಿಸದಿದ್ದರೆ | ರೂ. 200/– ಪ್ರಕರಣ ಒಂದಕ್ಕೆ |
| 7 | ಟೆಂಡರ್ ಕರಾರಿನ ಇತರೇ ಷರತ್ತುಗಳನ್ನು ಉಲ್ಲಂಘಿಸಿದರೆ | ಸಂದಂರ್ಭಾನುಸಾರ ರೂ 500/–ವರೆಗೆ |
| 8 | 2 ದಿನಕ್ಕಿಂತ ಹೆಚ್ಚಿನ ದಿವಸಗಳಲ್ಲಿ ಬ್ಯಾಟರಿ ಚಾಲಿತ ವಾಹನವನ್ನು ನಡೆಸದೇ ಇದ್ದಲ್ಲಿ | ರೂ.1,000/– ಒಂದು ವಾಹನಕ್ಕೆ |

19. ಟೆಂಡರುದಾರರ ಹಾಗೂ ಅವರ ಕೆಲಸಗಾರರ ಅಜಾಗರೂಕತೆಯಿಂದ ಪ್ರವಾಸಿಗರಿಗೆ, ಪ್ರಾಣಿಗಳಿಗೆ ಹಾಗೂ ಸುತ್ತುಮುತ್ತಲಿನ ಪ್ರದೇಶಗಳಿಗೆ ಆಗುವ ನಷ್ಟವನ್ನು ಟೆಂಡರುದಾರರೇ ತುಂಬಿಸಿಕೊಡಬೇಕು ಅಂತಹ ನಷ್ಟವನ್ನು ಲೆಕ್ಕಾಚಾರ ಮಾಡುವ ಅಧಿಕಾರ ಹಾಗೂ ನಷ್ಟಗಳ ಬಾಬ್ತಿಗೆ ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಈ ಕೆಳಗೆ ಸಹಿ ಮಾಡಿರುವವರಿಗೆ ಇರುತ್ತದೆ.

20. ಯಶಸ್ವಿಟೆಂಡರುದಾರರ ಇ.ಎಂ.ಡಿ ಭದ್ರತಾ ಠೇವಣಿಯಾಗಿ ಪರಿವರ್ತಿಸಲಾಗುವುದು. ಹಾಗೂ ಕರಾರು ಅವಧಿ ತೃಪ್ತಿಕರವಾಗಿ ಮುಗಿದ ಒಂದು ತಿಂಗಳ ನಂತರ ಅಥವಾ ಈ ಕೆಳಗೆ ಸಹಿಮಾಡಿರುವವರ ವಿವೇಚನೆ ಮೇರೆಗೆ ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು.

21. ಬ್ಯಾಟರಿ ಚಾಲಿತ ವಾಹನದ ಸೇವೆಯನ್ನು ಜೈವಿಕ ಉದ್ಯಾನವನದ ರಜಾ ದಿನಗಳನ್ನು ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 9.30 ರಿಂದ ಸಾಯಂಕಾಲ 6.00 ಗಂಟೆವರೆಗೆ ಮಾತ್ರ ನಡೆಸತಕ್ಕದ್ದು. ಸಾಯಂಕಾಲ 6.30 ಗಂಟೆಗೆ ಕೆಲಸಗಾರರೆಲ್ಲಾ ಮೃಗಾಲಯ ಆವರಣದಿಂದ ಹೊರಹೋಗತಕ್ಕದ್ದು. ಕೆಲಸಗಾರರು ಉದ್ಯಾನವನದ ಒಳಗೆ ತಂಗಲು ಅವಕಾಶವಿಲ್ಲ.

22. ಲೈಸೆನ್ಸ್‌ದಾರರು ಗುತ್ತಿಗೆ ಅವಧಿ0ಯ ಮಧ್ಯದಲ್ಲಿ ಬ್ಯಾಟರಿ ಚಾಲಿತ ವಾಹನದ ಸೇವೆಯನ್ನು ನಿಲ್ಲಿಸಿದಲ್ಲಿ ಅಥವಾ ಒಂದು ವಾರಕ್ಕಿಂತ ಹೆಚ್ಚಿಗೆ ನಡೆಸದೇ ಬಿಟ್ಟಲ್ಲಿ ಲೈಸೆನ್ಸ್‌ನ್ನು ರದ್ದುಪಡಿಸಿ ಲೈಸೆನ್ಸ್‌ದಾರರು ಪಾವತಿಸಿದ ಠೇವಣಿಯನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.



23. ಈ ರಹದಾರಿಗೆ ಸಂಬಂಧಪಟ್ಟ ಯಾವುದೇ ಷರತ್ತು ನಿಬಂಧನೆಗಳನ್ನು ಅರ್ಥೈಸುವಲ್ಲಿ ಮೂಡಬಹುದಾದ ಗೊಂದಲಗಳನ್ನು ನಿವಾರಿಸುವ ಅಧಿಕಾರ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಇರುತ್ತದೆ.

24. ಟೆಂಡರನ್ನು ಒಪ್ಪಿಕೊಳ್ಳುವ, ತಿರಸ್ಕರಿಸುವ ಅಥವಾ ಲೈಸನ್ಸ್ ಶುಲ್ಕದ ಮೊತ್ತವನ್ನು ಸಂಧಾನ ಮಾಡುವ ಹಕ್ಕು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಇರುತ್ತದೆ.

25. ಈ ಟೆಂಡರಿನ ಕರಾರಿಗಿಂತ ಮುಂಚೆ ಅಥವಾ ಕರಾರು ಅವಧಿಯಲ್ಲಿ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ಆಡಳಿತದ ಹಿತದೃಷ್ಟಿಯಿಂದ ಯಾವುದೇ ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ ಅಥವಾ ಕೈಬಿಡುವ ಅಧಿಕಾರ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ(ಕಾರ್ಯನಿರ್ವಾಹಕ ನಿರ್ದೇಶಕರು ಪಿಲಿಕುಳ ನಿಸರ್ಗಧಾಮ) ಇರುತ್ತದೆ.

26. ಅಗತ್ಯವೆ0ದು ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ಹಿತಾಸಕ್ತಿ0ಯನುಸಾರ ಒ0ದು ತಿ0ಗಳ ನೋಟೀಸು ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮಕ್ಕೆ ಇರುತ್ತದೆ. ಇದರಿಂದ ಸಂಭವಿಸಬಹುದಾದ ನಷ್ಟಗಳಿಗೆ ಪಿಲಿಕುಳ ನಿಸರ್ಗಧಾಮವು ಜವಾಬ್ದಾರರಾಗುವುದಿಲ್ಲ.

ಸಹಿ/–

**ಕಾರ್ಯನಿರ್ವಾಹಕ ನಿರ್ದೇಶಕರು**

**ರಿಗೆ,**

1. ದ. ಕ. ಜಿಲ್ಲಾಧಿಕಾರಿ0ಯವರ ಟೆಂಡರ್ ಬುಲೆಟಿನ್‌ಗೆ.
2. ನೊಟೀಸು ಬೊರ್ಡಿಗೆ.
3. ನಿರ್ದೇಶಕರು, ಪಿಲಿಕುಳ ಜೈವಿಕ ಉದ್ಯಾನವನ
4. ನಿರ್ದೆಶಕರು, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ
5. ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ

} ಮಾಹಿತಿ ಹಾಗೂ – ಸೂಕ್ತ ಪ್ರಚಾರಕ್ಕಾಗಿ.